ದಿನಾಂಕಃ 01.09.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ.ಕೆ ಸಿ ಪಿ ವಕೀಲರಿಂದ**

ಪ್ರತಿವಾದ ಪತ್ರಕ್ಕೆ ನಮ್ಮ ವಕೀಲರಿಗೆ ಮಾಹಿತಿ ನಾನೇ ಕೊಟ್ಟಿದ್ದೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿದ್ದೇನೆ. ಈ ದಾವೆಯನ್ನು ವಾದಿಯರು ಪ್ಲಾಟ ಸಲುವಾಗಿ ಹಾಕಿರುತ್ತಾರೆ.ನನಗೆ ದಾವಾ ಆಸ್ತಿ ನಂಬರು ಹೇಳಲು ಬರುವುದಿಲ್ಲ ನಾನು ಶಾಲೆ ಕಲಿತಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ವ್ಹಿಪಿಸಿ ನಂ.211 ಇರುತ್ತದೆ ಎಂದರೆ ಸರಿ. ಪಶ್ಚಿಮಕ್ಕೆ ಚಮನಸಾಬ ನದಾಫ ಇತನ ಉಳಿದ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ ಲಾಲಸಾಬ ನದಾಫ ಇತನ ಆಸ್ತಿ ಇರುತ್ತದೆ. ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ಸರಕಾರಿ ರಸ್ತೆ ಇರುತ್ತದೆ. ಇದರ ಒಟ್ಟು ಕ್ಷೇತ್ರ 3 ಗುಂಟೆ ಎಂದರೆ ಸರಿ. ಪೂರ್ವ-ಪಶ್ಚಿಮ 33 ಪೂಟು, ಉತ್ತರ-ದಕ್ಷಿಣ 99 ಪೂಟು ಇರುತ್ತದೆ ಎಂದರೆ ಸರಿ. ಈ ದಾವೆಯನ್ನು ವ್ಹಿಪಿಸಿ ನಂ.210 ಮತ್ತು 210/ಎ ಕುರಿತು ದಾಖಲಿಸಿರುತ್ತಾರೆ ಎಂದರೆ ಸರಿ. ಎರಡು ಒಂದಕ್ಕೊಂದು ಹೊಂದಿಕೊಂಡು ಇರುತ್ತವೆ ಎಂದರೆ ಸರಿ. ಈ ಮೇಲಿನ ಚಕಬಂದಿ ಎರಡು ಆಸ್ತಿಗಳನ್ನು ಸೇರಿಸಿ ಇರುತ್ತದೆ ಎಂದರೆ ಸರಿ. ಈ ಪ್ರಕರಣದಲ್ಲಿ ವಾದಿಯರು ಹಾಜರುಪಡಿಸಿದ ದಾಖಲಾತಿಗಳನ್ನು ನಾನು ನೋಡಿದ್ದೇನೆ. ಸದಡಿ ಎರಡು ಆಸ್ತಿಗಳ ಪಹಣಿಯಲ್ಲಿ ವಾದಿಯರ ಹೆಸರು ದಾಖಲಾಗಿರುತ್ತವೆ ಇಲ್ಲವೋ ಎಂದರೆ ಸರಿಯಲ್ಲ. ಪಂಚಾಯತಿಯಲ್ಲಿ ಠರಾವು ಪಾಸು ಮಾಡಿ ವಾದಿಯರ ಹೆಸರು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ನಮ್ಮ ಹೆಸರು ದಾಖಲು ಇದೆಯೋ ಇಲ್ಲವೋ ಎಂದರೆ ಮೊದಲು ಚಮನಸಾಬ ಮಾಡಿಕೊಟ್ಟಿದ್ದ ಆದರೆ ವಾದಿಯರು ಹರಕತ್ ಮಾಡುತ್ತಿದ್ದಾರೆ. ವಾದಿಯರು ಚಮನಸಾಬ ಆಸ್ತಿ ಮಾಡಿಕೊಡುವಾಗಲೇ ಹರಕತ್ ಮಾಡಿದ್ದರು. 25 ವರ್ಷದ ಹಿಂದೆ ಚಮನಸಾಬ ಆಸ್ತಿಗಳನ್ನು ನಮಗೆ ಮಾಡಿಕೊಟ್ಟಿರುತ್ತಾನೆ. ಅದರ ಕುರಿತು ದಾಖಲೆಗಳು ಇರುತ್ತವೆ ಹಾಜರುಪಡಿಸಿದ್ದೇನೆ. ಚಮನಸಾಬ 19000/- ರೂಪಾಯಿ ತೆಗೆದುಕೊಂಡು ಆಸ್ತಿಗಳನ್ನು ನಮಗೆ ಮಾಡಿಕೊಟ್ಟಿರುತ್ತಾನೆ. ಯಾವ ತೆರನಾದ ದಾಖಲಾತಿ ಮಾಡಿಕೊಟ್ಟಿರುತ್ತಾನೆ ಎಂದರೆ 50 ರೂಪಾಯಿ ಬಾಂಡನ ಮೇಲೆ ಬರೆದುಕೊಟ್ಟಿರುತ್ತಾನೆ. ಮೊದಲು ನಮ್ಮ ಅಣ್ಣನ ಹೆಸರಿನಲ್ಲಿ ಬರೆದುಕೊಟ್ಟಿರುತ್ತಾನೆ ನಂತರ ನನ್ನ ಹೆಂಡತಿ ಹೆಸರಿನಲ್ಲಿ ಮತ್ತು ಕಬೀರಸಾಬನ ಹೆಸರಿನಲ್ಲಿ ಅರ್ಧ ಒಟ್ಟು ಮೂರು ಬಾಂಡ್ ಬರೆದುಕೊಟ್ಟಿರುತ್ತಾನೆ. ಯಾವ ಇಸ್ವಿಯಲ್ಲಿ ಬರೆದುಕೊಟ್ಟಿರುತ್ತಾರೆ ಹೇಳಲು ಬರುವುದಿಲ್ಲ. ಕಾಗದ ಬರೆಯುವಾಗ ನಾನು ಇದ್ದೆ. ನಾನು ಸಹಿ

ಮಾಡಿಲ್ಲ ನನ್ನ ಅಣ್ಣ ಸಹಿ ಮಾಡಿರುತ್ತಾನೆ. ಮೂರು ದಾಖಲೆಗಳಿಗೂ ನನ್ನ ಹೆಂಡತಿ, ನನ್ನ ಅಣ್ಣ ಮತ್ತು ಕಬೀರಸಾಬನ ಸಹಿಗಳು ಇರುತ್ತವೆ. ಸದರಿ ಮೂರು ಕಾಗದಗಳು ಯಾವ ದಿನಾಂಕ, ತಿಂಗಳು, ಇಸ್ವಿಯಲ್ಲಿ ಆಗಿರುತ್ತವೆ ಹೇಳಲು ಬರುವುದಿಲ್ಲ. ಸದರಿ ಕಾಗದಗಳನ್ನು ಚಮನಸಾಬ ಬರೆಸಿರುತ್ತಾನೆ, ಹಣಗಿ ಇವರು ಬರೆದಿರುತ್ತಾರೆ. ದಾಖಲೆಗಳನ್ನು ಚಮನಸಾಬ, ನನ್ನ ಅಣ್ಣ, ಲಾಲಸಾಬ, ನಾನು, ಭೀಮಣ್ಣ, ಮೈಲಾರಪ್ಪ ತಳವಾರ ಬರೆಸಿರುತ್ತೇವೆ. ಸದರಿ ಕಾಗದಗಳನ್ನು ಬರೆಸುವಾಗ ಸಮಯ 12.00 ಗಂಟೆಯಾಗಿತ್ತು. ಹಣಗಿಯವರು ಟೈಪ ಮಾಡಿರುತ್ತಾರೆ. ಎಲ್ಲರೂ ಸಹಿ ಮಾಡಿರುತ್ತಾರೆ, ಸಹಿಗಳನ್ನು ಗುರುತಿಸುತ್ತೇನೆ. ಸಾಕ್ಷಿಗೆ ಒಂದು ದಾಖಲೆಯ ಹಿಂಭಾಗವನ್ನು ತೋರಿಸಿ ಯಾರು ಯಾರು ಎಲ್ಲಿ ಸಹಿ ಮಾಡಿರುತ್ತಾರೆ ಗುರುತಿಸಲು ಬರುತ್ತದೆಯಾ ಎಂದರೆ ಮೊದಲನೇ ಸಹಿ ಲಾಲಸಾಬ ನದಾಫ, ಎರಡನೇ ಸಹಿ ಭೀಮಣ್ಣ, ಮೂರನೇ ಸಹಿ ಮೈಲಾರಪ್ಪ ತಳವಾರ ಇವರದು ಇರುತ್ತದೆ ನನಗೆ ನಿಖರವಾಗಿ ಇದೇ ಸಹಿ ಇವರದು ಅಂತಾ ತೋರಿಸಲು ಬರುವುದಿಲ್ಲ ಏಕೆಂದರೆ ನನಗೆ ಓದಲು ಬರುವುದಿಲ್ಲ. ಸಾಕ್ಷಿಗೆ ಇನ್ನೂ ಎರಡು ದಾಖಲೆಗಳನ್ನು ಹಿಂಭಾಗ ಮಾತ್ರ ತೋರಿಸಿ ಸಹಿ ಗುರುತಿಸಲು ಕೇಳಿದಾಗ ಸದರಿ ದಾಖಲೆಗಳಿಗೂ ಸಹ ಮೂರು ಜನ ಸಹಿ ಮಾಡಿರುತ್ತಾರೆ ನಿಖರವಾಗಿ ಇದೇ ಸಹಿ ಇವರದು ಅಂತಾ ತೋರಿಸಲು ಬರುವುದಿಲ್ಲ ಏಕೆಂದರೆ ನನಗೆ ಓದಲು ಬರುವುದಿಲ್ಲ.

ಸದರಿ ಮೂರು ದಾಖಲಾತಿಗಳು ಒಂದೇ ದಿನ ಆಗಿರುತ್ತವೆ. ಮೂರು ದಾಖಲೆಗಳನ್ನು ಹಣಗಿಯವರು ಬರೆದಿರುತ್ತಾರೆ ನನ್ನ ಪ್ರಕಾರ ಅವರು ಸಹಿ ಮಾಡಿರುತ್ತಾರೆ. ಮೂರು ದಾಖಲಾತಿಗಳನ್ನು ಒಂದೇ ದಿನ ಬರೆದಿಲ್ಲ ಎಂದರೆ ಒಂದು ದಾಖಲೆ ಮೊದಲು ಮಾಡಿದ್ದು ಇರುತ್ತದೆ ಎರಡು ದಾಖಲೆಗಳನ್ನು ಒಂದೇ ದಿನ ಮಾಡಿದ್ದು ಇರುತ್ತದೆ. ನನಗೆ ಸದರಿ ದಾಖಲೆಗಳ ದಿನಾಂಕ, ತಿಂಗಳು ಮತ್ತು ವರ್ಷ ಹೇಳಲು ಬರುವುದಿಲ್ಲ. ಸದರಿ ಮೂರು ದಾಖಲಾತಿಗಳಿಗೆ ಹಣಗಿಯವರು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಈ ಮೇಲೆ ಹೇಳಿದ ವ್ಯಕ್ತಿಗಳು ಸಹಿ ಮಾಡಿಲ್ಲ ಆದ್ದರಿಂದ ನನಗೆ ಯಾರ ಸಹಿ ಅಂತಾ ಗುರುತಿಸಲು ಬರುವುದಿಲ್ಲ ನಾನೇ ಸೃಷ್ಟಿ ಮಾಡಿಕೊಂಡು ಅವರು ಸಹಿ ಮಾಡಿರುತ್ತಾರೆ ಅಂತಾ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಮನಸಾಬ ನನ್ನ ಅಣ್ಣನ ಹೆಸರಿನಲ್ಲಿ ಆಸ್ತಿ ಬರೆದುಕೊಟ್ಟಾಗ ಆತನಿಗೆ 19000/-ರೂಪಾಯಿ ಕೊಟ್ಟಿರುತ್ತೇವೆ. 19000/-ರೂಪಾಯಿ ಕೊಟ್ಟಿರುತ್ತೇವೆ ಅಂತಾ ಆ ದಾಖಲೆಯಲ್ಲಿ ಬರೆಸಿರುತ್ತಾರೆ. ಇನ್ನೂ ಎರಡು ದಾಖಲೆಗಳನ್ನು ಮಾಡಿಸುವಾಗ ಮತ್ತೆ 10

ಸಾವಿರ ರೂಪಾಯಿಗಳನ್ನು ಕೊಟ್ಟಿರುತ್ತೇವೆ. ಸದರಿ 10 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ ಅಂತಾ ಕಾಗದಗಳಲ್ಲಿ ಬರೆಸಿರುತ್ತೆವೆಯೋ ಇಲ್ಲವೋ ಅವರಿಗೆ ಗೊತ್ತು ನನಗೆ ಗೊತ್ತಿಲ್ಲ. ಸದರಿ ಮೂರು ಕಾಗದಗಳಲ್ಲಿ 19000/- ಮತ್ತು 10000/- ಕೊಟ್ಟಿರುವುದನ್ನು ಎಲ್ಲಿಯೂ ಕಾಣಿಸುವುದಿಲ್ಲ ಎಂದರೆ ನಾನು ಶಾಲೆ ಕಲಿತಿಲ್ಲ ನನಗೆ ಹೇಳಲು ಆಗುವುದಿಲ್ಲ. ನಾವು ಹಣ ಕೊಟ್ಟಿರುತ್ತೇವೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆಸ್ತಿಗಳ ಬೆಲೆ ವರ್ಷಕ್ಕೆ ವರ್ಷ ಜಾಸ್ತಿ ಆಗುತ್ತದೆ ಎಂದರೆ ಸರಿ. ಸದರಿ ದಾಖಲೆಗಳಲ್ಲಿರುವ ಸಹಿಗಳು ಅವರ ಸಹಿಗಳಲ್ಲ ಅವು ಖೊಟ್ಟಿ ಸಹಿಗಳು ಇರುತ್ತವೆ ಎಂದರೆ ಸರಿಯಲ್ಲ. ಚಮನಸಾಬ ಸಹಿ ಗುರುತಿಸಲು ಆಗುವುದಿಲ್ಲ ಎಂದರೆ ನಾನು ಶಾಲೆ ಕಲಿತಿಲ್ಲ. ಸಾಕ್ಷಿಯು ದಾಖಲಾತಿಯನ್ನು ನೋಡಿ ಸಿ.ಪಿ.ನದಾಫ ಅಂತಾ ಇಂಗ್ಲೀಷನಲ್ಲಿರುವ ಈಗಾಗಲೇ ನಿಡಿ-20 ಎ ಅಂತಾ ಗುರುತಿಸಿರುವ ಸಹಿಯನ್ನು ಚಮನಸಾಬನ ಸಹಿ ಅಂತಾ ಗುರುತಿಸಿರುತ್ತಾನೆ.

ಸಾಕ್ಷಿಗೆ ನಿಡಿ-18 ಮತ್ತು 19 ರಲ್ಲಿ ಚಮನಸಾಬ ಇತನ ಸಹಿ ಗುರುತಿಸಲು ಕೇಳಿದಾಗ ಸಾಕ್ಷಿ ನಿಡಿ-18 ರಲ್ಲಿ ಪುಟ -2 ರಲ್ಲಿರುವ ಈಗಾಗಲೇ ನಿಡಿ-18 ಎ ಅಂತಾ ಗುರುತಿಸಿರುವ ಸಹಿಯನ್ನು ಚಮನಸಾಬನ ಸಹಿ ಅಂತಾ ಗುರುತಿಸಿರುತ್ತಾನೆ. ಅದರಂತೆ ನಿಡಿ-19 ರಲ್ಲಿ ಪುಟ-2 ರಲ್ಲಿ ರುವ ಈಗಾಗಲೇ ನಿಡಿ-19 ಎ ಅಂತಾ ಗುರುತಿಸಿರುವ ಸಹಿಯನ್ನು ಚಮನಸಾಬನ ಸಹಿ ಅಂತಾ ಗುರುತಿಸಿರುತ್ತಾನೆ. ಸದರಿ ಮೂರು ದಾಖಲೆಗಳಿಗೆ ಚಮನಸಾಬ ನನ್ನ ಮುಂದೆಯೇ ಸಹಿ ಮಾಡಿರುತ್ತಾನೆ. ಸದರಿ ಸಹಿಗಳನ್ನು ಯಾವ ದಿನಾಂಕದಂದು ಮಾಡಿರುತ್ತಾರೆ ಎಂದರೆ 2020 ರಲ್ಲಿ ಮಾಡಿರುತ್ತಾರೆ ದಿನಾಂಕ ಹೇಳಲು ಬರುವುದಿಲ್ಲ. ಇದನ್ನು ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ನಾನು ಗುರುತಿಸಿದ ಮೂರು ಸಹಿಗಳು ಬೇರೆ ಬೇರೆ ಇರುತ್ತವೆ ಎಂದರೆ ಸರಿಯಲ್ಲ ಒಬ್ಬರದೇ ಇರುತ್ತದೆ. ಮೂರು ಸಹಿಗಳು ಒಬ್ಬರದೇ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಮನಸಾಬ ಸಹಿಗಳನ್ನು ಮಾಡಿಲ್ಲ, ನಾವೇ ಪೋರ್ಜರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಸದರಿ ಮೂರು ಬಾಂಡಗಳನ್ನು ಯಾವ ವಿಷಯಕ್ಕಾಗಿ ಖರೀದಿಸಿರುತ್ತಾರೆ ಎಂದರೆ ಹೇಳಲು ಬರುವುದಿಲ್ಲ. ಸದರಿ ಮೂರು ದಾಖಲೆಗಳಲ್ಲಿರುವ ಒಕ್ಕಣೆಗೂ ಮತ್ತು ನಾನು ಹೇಳುತ್ತಿರುವ ಖರೀದಿಗೂ ಹೊಂದಾಣಿಕೆ ಆಗುವುದಿಲ್ಲ ಎಂದರೆ ಸರಿಯಲ್ಲ ನಾವು ಹಣ ಕೊಟ್ಟಿದ್ದು ಕರೆ ಇರುತ್ತದೆ. ಯಾವ ಭಾಗದ ಆಸ್ತಿಯನ್ನು ಯಾರಿಗೆ ಕೊಟ್ಟಿರುತ್ತಾರೆ ಅಂತಾ

ಹೇಳಲು ಬರುತ್ತದೆ. ಪೂರ್ವದ ಕಡೆಗೆ ಅಂದರೆ ಸೂರ್ಯ ಹುಟ್ಟುವ ಕಡೆಗೆ ಕಬೀರಸಾಬನಿಗೆ, ಪೀರಾಬಿ ನದಾಫಗೆ ಸೂರ್ಯ ಮುಳುಗುವ ಕಡೆಗೆ ಅಂದರೆ ಪಶ್ಚಿಮದ ಕಡೆಗೆ ಕೊಟ್ಟಿರುತ್ತಾರೆ. ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ರಸ್ತೆಗಳು ಇರುತ್ತವೆ. ಈಗ ನಾನು ಹೇಳಿದಂತೆ ಕಾಗದಗಳಲ್ಲಿ ಬರೆದಿರುತ್ತಾರೆ. ಸದರಿ ವಿಷಯವನ್ನು ನಿಡಿ-18 ಮತ್ತು 19 ರಲ್ಲಿಯೇ ಬರೆದಿರುತ್ತಾರೆ. ನಾನು ಹೇಳಿದ ಹಾಗೆ ಪೂರ್ವದ ಭಾಗದ ಕಬೀರಸಾಬನಿಗೆ ಪಶ್ಚಿಮದ ಕಡೆಗೆ ಪೀರಾಬಿಗೆ ಕೊಟ್ಟಿರುತ್ತಾರೆ ಅಂತಾ ಬರೆಸಿಲ್ಲ ಎಂದರೆ ಸರಿಯಲ್ಲ. ನಾವು ಹಾಜರುಪಡಿಸಿದ ನಕಾಶೆಯಲ್ಲಿ ಸಹ ಈ ವಿಷಯವನ್ನು ಕಾಣಿಸಿಲ್ಲ ಎಂದರೆ ಸರಿಯಲ್ಲ. ಆ ರೀತಿ ಕಾಣಿಸದಿದ್ದರೂ ಸಹ ಕಾಣಿಸಿದ್ದೇನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಚಮನಸಾಬ ಹೆಸರನ್ನು ಕಡಿಮೆ ಮಾಡಿ ಕಬೀರಸಾಬ ಮತ್ತು ಪೀರಾಬಿ ಹೆಸರು ದಾಖಲಿಸಲು ಕೊಟ್ಟಾಗ ವಾದಿಯರು ತಕರಾರು ಮಾಡಿರುತ್ತಾರೆ. ಸದರಿ ದಾವಾ ಆಸ್ತಿಗೆ ನಾವು ಇದುವರೆಗೆ ತೆರಿಗೆ ತುಂಬಿಲ್ಲ. ಮೊದಲು ಚಮನಸಾಬ ತೆರಿಗೆ ತುಂಬುತ್ತಿದ್ದ ಎಂದರೆ ತುಂಬಿರಬಹುದು. ಈಗ ವಾದಿಯರು ತುಂಬುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಡುವೆ ತುಂಬಿದ್ದರು ಅಂತಾ ನುಡಿಯುತ್ತಾರೆ. ಈಗ 2-3 ವರ್ಷದ ಹಿಂದೆ ವಾದಿಯರು ತೆರಿಗೆ ತುಂಬಿದ್ದರು. ಪಂಚಾಯತಿ ಉತಾರದಲ್ಲಿ ಅವರ ಹೆಸರು ದಾಖಲೆ ಇದ್ದುದ್ದರಿಂದ ಹಣ ತುಂಬಿರುತ್ತಾರೆ ಎಂದರೆ ಅವರು ಆಸ್ತಿಯನ್ನು ನಮಗೆ ಕೊಟ್ಟಿರುತ್ತಾರೆ. ವಾದಿಯರ ಹೆಸರು ದಾವಾ ಆಸ್ತಿಗೆ ಇಲ್ಲಿಯವರೆಗೆ ಇರುತ್ತದೆ ಎಂದರೆ ಇದು ನಡುವೆ ಮಾಡಿಕೊಂಡಿರುತ್ತಾರೆ. 5-6 ವರ್ಷದ ಹಿಂದೆ ಯಾವ ಕಾರಣಕ್ಕೆ ವಾದಿಯರ ಹೆಸರು ಎಂಟ್ರಿಯಾಗಿರುತ್ತದೆ ಅಂತಾ ಚಮನಸಾಬನನ್ನು ವಿಚಾರಿಸಿದ್ದೇನೆ. ಆತ ಏನೂ ಹೇಳಿದ ಅಂತಾ ಕೇಳಿದರೆ ಸಾಕ್ಷಿ ಯಾವುದೇ ಉತ್ತರ ನುಡಿಯುವುದಿಲ್ಲ. ಚಮನಸಾಬ 2013 ರಲ್ಲಿ ಠರಾವು ಪಾಸು ಮಾಡುವುದರ ಮೂಲಕ ವಾದಿಯರ ಹೆಸರನ್ನು ದಾಖಲಿಸಿರುತ್ತಾನೆ ಎಂದರೆ ಸರಿ. ಸದರಿ ದಾಖಲೆಯನ್ನು ನಾವು ಎಲ್ಲಿ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ಚಮನಸಾಬ ಜೀವಂತ ಇರುತ್ತಾನೆ ಆತನೂ ಸಹ ಸದರಿ ವಾದಿಯರ ಹೆಸರು ದಾಖಲೆ ಇರುವ ದಾಖಲೆಗಳನ್ನು ಪ್ರಶ್ನಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸರಕಾರಿ ಯೋಜನೆ ಸಲುವಾಗಿ ಚಮನಸಾಬ ಆಸ್ತಿಗಳನ್ನು ವಾದಿಯರ ಹೆಸರಿನಲ್ಲಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಚಮನಸಾಬ ದಾವಾ ಆಸ್ತಿಯನ್ನು ಖರೀದಿ ತೆಗೆದುಕೊಂಡಿದ್ದ ಎಂದರೆ ಸರಿ. ಖರೀದಿಪ್ರಕಾರ ಆತನೇ ಮಾಲೀಕ ಇದ್ದ ಎಂದರೆ ಸರಿ. ನಮ್ಮ ಪ್ರತಿವಾದಪತ್ರದಲ್ಲಿ ದಾವಾ ಆಸ್ತಿ ಒಟ್ಟು ಕುಟುಂಬದ ಆಸ್ತಿ ಇತ್ತು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಯಾವುದೇ ಕಾಲಕ್ಕೂ ದಾವಾ ಆಸ್ತಿಗಳ ಕಬ್ಜೆಯಲ್ಲಿ ಇರುವುದಿಲ್ಲ

ಎಂದರೆ ಸರಿಯಲ್ಲ. ದಿಃ 31.05.1984 ರಲ್ಲಿ ಚಮನಸಾಬ ಖರೀದಿ ಮಾಡಿದ ನಂತರ ಇಲ್ಲಿಯವರೆಗೆ ಹಿಸ್ಸೆ ಇರುತ್ತದೆ ಅಂತಾ ಕೇಸು ಮಾಡಿರುತ್ತೀರಾ ಎಂದರೆ ಇದೇ ನ್ಯಾಯಾಲಯದಲ್ಲಿ ಮಾಡಿರುತ್ತೇನೆ. ಅದರ ನಂತರ ಹೇಳಲು ಬರುವುದಿಲ್ಲ. ಅದು ಚಾಲ್ತಿ ಇರುತ್ತದೆ. ಅದು ಯಾವ ಕೇಸು ಎಂದರೆ ಈ ದಾವೆ ಇರುತ್ತದೆ. ಈ ದಾವೆ ಹೊರತುಪಡಿಸಿ ಬೇರೆ ದಾವೆ ಇರುವುದಿಲ್ಲ. ಸದರಿ ದಾವಾ ಆಸ್ತಿ ಚಮನಸಾಬನ ಸ್ವಂತ ಆಸ್ತಿ ಇರುವುದರಿಂದ ಯಾವುದೇ ದಾವೆ ಹಾಕಿಲ್ಲ ಎಂದರೆ ಚಮನಸಾಬ ನಮಗೆ ಕೊಟ್ಟಿರುತ್ತಾನೆ.

ನಮಗೂ ಸಹ ಹಕ್ಕು ಇದ್ದರೆ ನಿಡಿ-18 ರಿಂದ 20 ದಾಖಲೆಗಳನ್ನು ಬರೆಸಿಕೊಳ್ಳುವ ಪ್ರಸಂಗ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಕೂಡಿ ಇದ್ದಾಗಲೇ ಅವುಗಳನ್ನು ಬರೆದುಕೊಟ್ಟಿರುತ್ತಾನೆ. ಈಗಲೂ ಕೂಡಿಯೇ ಇರುತ್ತೇವೆ. ಈಗಲೂ ಕೂಡಿಯೇ ಇರುತ್ತಿದ್ದೇವೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ನಮ್ಮ ಕುಟುಂಬಕ್ಕೂ, ಚಮನಸಾಬನ ಕುಟುಂಬಕ್ಕೂ ಮತ್ತು ವಾದಿಯರ ಕುಟುಂಬಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಡಿ-11 ರಿಂದ 16 ಪೊಟೋಗಳು ಈ ದಾವೆಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಡಿ-17 ನೋಟಿಸಿನಲ್ಲಿ ವಾದಿಯರ ಹೆಸರು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ-17 ಸಹ ಈ ದಾವೆಗೆ ಸಂಬಂಧಿಸಿಲ್ಲ ಎಂದರೆ ಸಾಕ್ಷಿ ಯಾವುದೇ ಉತ್ತರ ನುಡಿಯುವುದಿಲ್ಲ. ಜಟೀರಸಾಬ ಎಂದರೆ ಅದು ನನ್ನ ಹೆಸರು. ನನಗೆ ಜಟೀರಸಾಬ ಅಂತಲೂ ಸಹ ಕರೆಯುತ್ತಾರೆ ಅಂತಾ ನಾನು ದಾವೆಯಲ್ಲಿ ಎಲ್ಲಿಯೂ ಕಾಣಿಸಿಲ್ಲ ಎಂದರೆ ಸರಿ. ನಿಡಿ-3 ರಿಂದ 10 ದಾಖಲೆಗಳು ಈ ದಾವೆಗೆ ಸಂಬಂಧಿಸಿಲ್ಲ ಎಂದರೆ ಸರಿಯಲ್ಲ. ಈ ದಾವಾ ಆಸ್ತಿಗಳಲ್ಲಿ ವಾದಿಯರು ಅನುಮತಿ ಪಡೆದು ಮನೆ ಕಟ್ಟುವಾಗ ನಾನು ತಕರಾರು ಮಾಡಿದ್ದಕ್ಕೆ ಈ ದಾವೆ ಮಾಡಿರುತ್ತಾರೆ ಎಂದರೆ ಚಮನಸಾಬ ಮೆಂಬರ್ ಇದ್ದಾಗ ನನ್ನ ಹೆಣ್ಣುಮಕ್ಕಳ ಅಂದರೆ ನನ್ನಹೆಂಡತಿ ಹೆಸರಿನಲ್ಲಿ ಅರ್ಧ ಮತ್ತು ಕಬೀರಸಾಬನ ಹೆಸರಿನಲ್ಲಿ ಅರ್ಧ ಮಾಡಿಕೊಟ್ಟಿರುತ್ತಾನೆ ಮತ್ತು ಮನೆಯನ್ನು ಸಹ ಅವನೇ ಹಾಕಿಸಿಕೊಟ್ಟಿರುತ್ತಾನೆ.

ದಾವಾ ಆಸ್ತಿಯಲ್ಲಿ ವಾದಿಯರು ಇವತ್ತಿನವರೆಗೂ ಬಣವೆ ಹಾಕಿಕೊಂಡು ಕಬ್ಜೆಯಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. 2015 ರಲ್ಲಿ ನಾವು ಹರಕತ್ ಮಾಡಿದ್ದಕ್ಕಾಗಿ ಈ ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ದಾಖಲಾತಿಗಳನ್ನು ಸೃಷ್ಟಿಸಿಕೊಂಡು, ಸಹಿಗಳನ್ನು ಪೋರ್ಜರಿ ಮಾಡಿ ನಾನು ಕಬ್ಜೆಯಲ್ಲಿ ಇರದಿದ್ದರೂ ಸಹ ವಾದಿಯರಿಗೆ ತೊಂದರೆ ಕೊಡಬೇಕು ಅಂತಾ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.